# ಸಣ್ಣ ಉದ್ಯಮಗಳಿಗೆ ತಂತ್ರಜ್ಞಾನ ನೆರವು

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮಾಹಿತಿ ತಂತ್ರಜ್ಞಾನದ ಮೇಲೆ ಮಾಡುವ ವೆಚ್ಚ 2015ರ ಅಂತ್ಯಕ್ಕೆ 15 ಶತಕೋಟಿ ಡಾಲರ್ ತಲುಪಲಿದೆ. ಮಾಹಿತಿ ತಂತ್ರಜ್ಞಾನ ಉದ್ಯಮದ ಅನಿವಾರ್ಯ ವಿಭಾಗವಾಗಿ ಬೆಳೆದಿದೆ. ಕಂಪ್ಯೂಟರ್, ನೆಟ್‌ವರ್ಕಿಂಗ್, ಇಮೇಲ್, ಫೈರ್‌ವಾಲ್ ಇವುಗಳಿಲ್ಲದೇ ಯಾವುದೇ ಕಂಪೆನಿ ವಹಿವಾಟಿನಲ್ಲಿ ಯಶಸ್ಸು ಸಾಧ್ಯವಿಲ್ಲ ಎನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಹೊಸ ಕಂಪೆನಿಗಳ ಆರಂಭ ಹೆಚ್ಚಾಗುತ್ತಿರುವುದು ಬೆಂಗಳೂರಿನಲ್ಲಿ. "ಬೆಂಗಳೂರು ಸ್ಟಾರ್ಟಪ್‌ಗಳ ನಗರ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಾತ್ರವಲ್ಲದೇ ಹೊಸ ಹೊಸ ಪ್ರಯೋಗಗಳು ಇಲ್ಲಿ ನಡೆಯುತ್ತಿವೆ. ಮಾಹಿತಿ ತಂತ್ರಜ್ಞಾನ ಪ್ರತಿಯೊಂದರಲ್ಲು ಹಾಸುಹೊಕ್ಕಾಗಿದೆ" ಎನ್ನುತ್ತಾರೆ ಮ್ಯಾನೇಜ್‌ಎಂಜಿನ್ ಸಂಸ್ಥೆಯ ಎಂಜಿನಿಯರಿಂಗ್ ವಿಭಾಗದ ಉಪಾಧ್ಯಕ್ಷ ಶೈಲೇಶ್ ಕುಮಾರ್ ದವೆ.

ಭಾರತ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ರಾಷ್ಟ್ರ. ತಮ್ಮ ಉತ್ಪಾದಕೆಯನ್ನು ಹೆಚ್ಚಿಸಲು ಈ ಕಂಪೆನಿಗಳು ತಂತ್ರಜ್ಞಾನವನ್ನು ಹೆಚ್ಚು ಬಳಸಲಾರಂಭಿಸಿವೆ. ಐದು ಲಕ್ಷಕ್ಕೂ ಹೆಚ್ಚು ಉದ್ಯಮಗಳು ಸ್ವಂತ ವೆಬ್ ಸೈಟ್ ಹೊಂದಿವೆ. 20 ಲಕ್ಷಕ್ಕೂ ಹೆಚ್ಚು ಕಂಪೆನಿಗಳು ಇಂಟರ್‌ನೆಟ್ ಸಂಪರ್ಕ ಪಡೆದಿವೆ. ಕಂಪ್ಯೂಟರ್ ಮತ್ತು ಡೆಸ್ಕ್ ಟಾಪ್ ನಿರ್ವಹಣೆ, ಇಂಟರ್‌ನೆಟ್ ಮತ್ತು ಬ್ಯಾಂಡ್‌ವಿಡ್ತ್, ವೆಬ್‌ಸೈಟ್ ನಿರ್ವಹಣೆಗೆ ಆಧುನಿಕ ಕಂಪೆನಿಗಳು ಹೆಚ್ಚು ಒತ್ತು ನೀಡುತ್ತಿವೆ. ದೇಶೀಯ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಎದುರಾಗುವ ಸ್ಪರ್ಧೆ ನಿರ್ವಹಿಸಲು ಇದು ಉತ್ತಮ ಸಾಧನವಾಗಿದೆ.

ಸಾಮಾನ್ಯವಾಗಿ ಹೊಸದಾಗಿ ಆರಂಭವಾದ ಕಂಪೆನಿಗಳೆಂದರೆ ಏಕ ವ್ಯಕ್ತಿ ಪ್ರದರ್ಶನ. ದುಬಾರಿ ಸಾಫ್ಟ್‌ವೇರ್ ಅವು ಇಷ್ಟಪಡುವುದಿಲ್ಲ. ಅಷ್ಟು ಮೂಲ ಸೌಕರ್ಯ ಸಂಸ್ಥೆಗಳ ಬಳಿ ಇರುವುದಿಲ್ಲ. ಇದನ್ನು ಗಮನಿಸಿಯೇ ಮ್ಯಾನೇಜ್ ಎಂಜಿನ್ ಜಾಗತಿಕ ಗುಣಮಟ್ಟದ ಉತ್ಪನ್ನಗಳನ್ನು ರೂಪಿಸಿವೆ. ಆದರೆ ಇವು ಉಚಿತವಾಗಿಯೋ ಅಥವಾ ಅತ್ಯಂತ ಕಡಿಮೆ ವೆಚ್ಚದಲ್ಲಿ ಸ್ಟಾರ್ಟ್‌ಅಪ್ ಮತ್ತು ಸಣ್ಣ ಕಂಪೆನಿಗಳಿಗೆ ದೊರೆಯುತ್ತಿವೆ.

'ಒಂದು ಸಂಸ್ಥೆ ಉತ್ಪನ್ನಗಳನ್ನು ಪ್ರಚುರಪಡಿಸಬೇಕಾದರೆ ಜಾಹೀರಾತಿನ ಮೊರೆ ಹೋಗಬೇಕು. ಅದೂ ನಿರ್ದಿಷ್ಟ ಗುರಿಯ ಗ್ರಾಹಕರನ್ನು ತಲುಪು ವುದೆಂಬ ಖಾತ್ರಿ ಇರುವುದಿಲ್ಲ. ಹಾಗಾಗಿ ನಾವು ನಮ್ಮ ಉತ್ಪನ್ನಗಳನ್ನು ಗ್ರಾಹಕ ರಿಗೆ ಉಚಿತವಾಗಿ ನೀಡುತ್ತೇವೆ. ಅವರು ಬೇಕಾದಷ್ಟು ಸಮಯ ಬಳಸಬಹುದು. ಇಷ್ಟವಾದರೆ ಇನ್ನಷ್ಟು ಫೀಚರ್‌ಗಳಿರುವ ಸುಧಾರಿತ ಸಾಫ್ಟ್‌ವೇರ್ ಖರೀದಿಸ ಬಹುದು' ಎಂದು ಶೈಲೇಶ್ ತಮ್ಮ ಮಾರುಕಟ್ಟೆ ತಂತ್ರವನ್ನು ವಿವರಿಸುತ್ತಾರೆ.

ಮ್ಯಾನೇಜ್‌ಎಂಜಿನ್‌ನ ಶೇ 72ರಷ್ಟು ಪ್ರೀಮಿಯಂ ಉತ್ಪನ್ನಗಳು ಉಚಿತವಾಗಿ ದೊರೆಯುತ್ತದೆ. ಅಲ್ಲದೇ ಶೇ 100ರಷ್ಟು ತಂತ್ರಜ್ಞಾನ ಸಹಾಯವೂ ಗ್ರಾಹಕರಿಗೆ ದೊರೆಯುತ್ತದೆ. ಪ್ರಸ್ತುತ ಮ್ಯಾನೇಜ್ ಎಂಜಿನ್ 51 ಉತ್ಪನ್ನಗಳನ್ನು ಹೊಂದಿದ್ದು, ಇವು ವಿಂಡೋಸ್, ಐಟಿ ಯುಟಿಲಿಟಿಗಳು, ಕ್ಲೌಡ್ ಮಾನಿಟ ರಿಂಗ್, ಹೆಲ್ಪ್ ಡೆಸ್ಕ್ ವಿಭಾಗಗಳನ್ನು ಒಳಗೊಂಡಿವೆ.

ಚೆನ್ನೈ ಮೂಲದ ಮ್ಯಾನೇಜ್ ಎಂಜಿನ್ ಇದುವರೆಗೆ ಅಮೆರಿಕ, ಯುರೋಪ್, ಮಧ್ಯಪ್ರಾಚ್ಯ ಮತ್ತಿತರ ರಾಷ್ಟ್ರಗಳಲ್ಲಿ ಗ್ರಾಹಕರ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳುತ್ತಿತ್ತು. ಗ್ರಾಹಕರಿಗೆ ತಮ್ಮ ಉತ್ಪನ್ನಗಳನ್ನು ವಿವರಿಸುವುದರ ಜೊತೆಗೆ ಅವರ ಅವಶ್ಯಕತೆಯನ್ನೂ ತಿಳಿದುಕೊಳ್ಳುವುದು ಕಂಪೆನಿಯ ಆಶಯ. ಇತ್ತೀಚೆಗೆ ಬೆಂಗಳೂರಿ ನಲ್ಲಿಯೂ ಇಂಥದ್ದೊಂದು ವಿಚಾರ ಸಂಕಿರಣ ಸಂಸ್ಥೆ ಹಮ್ಮಿಕೊಂಡಿತ್ತು.